ಉಪಾಧ್ಯಕ್ಷರು:- ಆ ರೀತಿ ಕೇಳುವುದಕ್ಕಾಗುವುದಿಲ್ಲ.

ವಿಷಯ:- ಕೊಡಗು ಜಿಲ್ಲೆಯಲ್ಲಿ ಸರ್ವೇಯರ್‌ಗಳ ನೇಮಕಾತಿ.

366 (2263) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಆ) ಒಂದೊಂದು ಹೋಬಳಿಗೆ ಒಬ್ಬೊಬ್ಬ ಸರ್ವೇಯರ್‌ರನ್ನು ನೇಮಿಸುವ ಉದ್ದೇಶ ಸರ್ಕಾರದ ಮುಂದಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಕೊಡಗು ಜಿಲ್ಲೆಯಲ್ಲಿ 18 ಎರಡನೇ ದರ್ಜೆ ಭೂಮಾಪಕರ ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಲಾಗುವುದು.

ಆ) ಹೌದು. ಒಂದು ಹೋಬಳಿಗೆ ಒಬ್ಬ ಸರ್ವೇಯರ್‌ರನ್ನು ನೇಮಕ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಎ.ಪಿ. ಅಪ್ಪಚ್ಚು ರಂಜನ್:- ಕೊಡಗಿನಲ್ಲಿ ಹೋಬಳಿಗೆ ಒಂದು ಸರ್ವೆಯರ್ ರೀತಿ, ಸರ್ವೇಯರ್ಸ್ ಕೊಡುತ್ತೀರಾ ಎಂದು ಕೇಳಿದ್ದೆ, ಕೊಡುತ್ತೇವೆಂದು ಹೇಳಿದ್ದಾರೆ. ಖಾಲಿ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಎಂದು ಕೇಳಿದ್ದೆ. ಆದಷ್ಟು ಶೀಘ್ರವಾಗಿ ತುಂಬುತ್ತೇವೆಂದು ಹೇಳಿದ್ದಾರೆ. ಕೊಡಗಿನಲ್ಲಿ ರೀಸರ್ವೆ ಆಫೀಸ್‌ಗೆ ಶ್ರೀ ಬಸವಲಿಂಗಪ್ಪನವರ ಕಾಲದಲ್ಲಿ ಆದೇಶ ಮಾಡಿ ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ಅಲ್ಲೇ ಬಿಟ್ಟು ಹೋಗಿದ್ದಾರೆ. ಇದಕ್ಕೆ ಕಾರಣವೇನು? ರೀಸರ್ವೆ ಏನಿದೆ ಅದನ್ನು ವಾಪಸ್ಸು ತರುತ್ತೀರೋ? ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದನ್ನು ಯಾವ ಕೈಯಿಂದ ವಸೂಲ್ಮಾಡುತ್ತೀರಿ? ಇದು ಸರ್ಕಾರಕ್ಕೆ ಲಾಸ್ ಆಗಲಿಲ್ಲವೇ?

ಶ್ರೀ ರಮೇಶ್ ಸಿ. ಜಿಗಜಿಣಗಿ:- ಅವರು ಕೇಳಿರತಕ್ಕ ಪ್ರಶ್ನೆಗೂ ಮೂಲ ಪ್ರಶ್ನೆಗೂ ಯಾವುದೇ ಸಂಬಂಧ ಇಲ್ಲ. ಬೇರೆ ಪ್ರಶ್ನೆ ಕೇಳಲಿ. ವಿವರಗಳನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರ ಹೇಳುತ್ತೇನೆ. ಅವರು ಎರಡನೇ ದರ್ಜೆ ಸರ್ವೇಯರ್ 18 ಹುದ್ದೆಗಳು ಖಾಲಿ ಇವೆ, ಯಾವಾಗ ತುಂಬುತ್ತೀರೆಂದು ಕೇಳಿದ್ದಾರೆ. ಈ ತಿಂಗಳ ಕೊನೆಯೊಳಗೆ ತರಬೇತಿ ಮುಗಿಯುತ್ತದೆ, ಒಂದು ಸಾವಿರ ಅಭ್ಯರ್ಥಿಗಳನ್ನು ಭರ್ತಿ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಈ ತಿಂಗಳ 30ರಲ್ಲಿ ತರಬೇತಿ ಮುಗಿಯುತ್ತದೆ, ಮುಂದಿನ ತಿಂಗಳ 15 ರೊಳಗೆ ಎಲ್ಲಾ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಪ್ರಶ್ನೆ ಕಂದಾಯ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು. ತಮ್ಮ

ಗಮನದಲ್ಲಿರಬಹುದು, ಕಳೆದ ಸಾರಿ ಈ ವಿಚಾರವಾಗಿ ಪ್ರಶ್ನೆ ಕೇಳಿದ್ದೆ, ರೀಸರ್ವೆ ಆಫೀಸ್ ಕ್ಲೋಸ್ ಮಾಡುತ್ತಿದ್ದಾರೆ. ನಮ್ಮಲ್ಲಿ ಸರ್ವೆಯರ್ ಶಾರ್ಟೇಜ್ ಇದ್ದಾರೆ, ಅವರನ್ನು ಅಲ್ಲೇ ರೀಟೈನ್ ಮಾಡಿ ಎಂದು ಕೇಳಿದ್ದೆ. ಅದಕ್ಕೆ ಶ್ರೀ ಜಾಲಪ್ಪನವರು ಉತ್ತರಕೊಟ್ಟಿದ್ದರು. ನಾವು ಹೊಸದಾಗಿ ಸರ್ವೆಯರ್ ಹುದ್ದೆ ಕೊಡುತ್ತೇವೆಂದು ಹೇಳಿದ್ದರು, ಇದುವರೆಗೆ ಕೊಡಲಿಲ್ಲ. ಇದರಿಂದ ನಮ್ಮ ಕೊಡಗಿನಲ್ಲಿ ಕೇಸು-ಗಳು ದಾಖಲಾಗಿ ಆ ಕೇಸುಗಳು ಕೋರ್ಟಿನಲ್ಲಿ ಇತ್ಯರ್ಥವಾಗುತ್ತಿಲ್ಲ. ಕಾರಣವೇನೆಂದರೆ, ಸರ್ವೆ ಮಾಡಿದಂಥ ಸಂದರ್ಭದಲ್ಲಿ ಸರ್ವೆ ಮಾಡಿದ ಸ್ಕೆಚ್‌ನ್ನು ಕೇಳಿದರೆ Survey is not accurate ಎಂದು ಕೊಟ್ಟು ಯಾವುದೇ ಮೊಕದ್ದಮೆ ಇತ್ಯರ್ಥವಾಗುವುದಿಲ್ಲ. ಆ ಕಾರಣದಿಂದ ಕೇಳಿದ್ದೇನೆ, ಅದಕ್ಕೆ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ:- ಮುಂದಿನ ತಿಂಗಳ 30ರೊಳಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ವಿ. ಸದಾನಂದ ಗೌಡ:- ಒಂದು ಹೋಬಳಿಗೆ ಒಂದು ಸರ್ವೇಯರ್ ಕೊಡುತ್ತೇವೆಂದು ತಾವು ಒಪ್ಪಿಕೊಂಡಿದ್ದೀರಿ. ಹೋಬಳಿಗೆ ಬದಲು ಒಂದು ಸಬ್-ಡಿವಿಜನ್‌ನಲ್ಲಿ ಬಾಕಿ ಇರುವಂಥ ಕಡತಗಳು ಎಷ್ಟು; ಆ ಕಡತಗಳ ಆಧಾರದ ಮೇಲೆ ಸರ್ವೆಯರನ್ನು ಅಪಾಯಿಂಟ್ ಮಾಡಬಹುದೆ? ಈ ಯೋಜನೆ ಸರ್ಕಾರ ಮಾಡಬಹುದೆ? ಎರಡನೆಯದಾಗಿ, ನಾವು ವಿಲೇವಾರಿ ಅರ್ಜಿ ಹಾಕುತ್ತೇವೆ. ಅರ್ಜಿ ಹಾಕಿ ವರ್ಷಗಟ್ಟಲೆ ಕಳೆಯುತ್ತದೆ. ಅದೂ ಕೂಡ ಎ.ಡಿ.ಎಲ್.ಆರ್. ಆಫೀಸ್ ಅಂದರೆ ಅತ್ಯಂತ ಡಿಲೇ ಮಾಡುವ ಆಫೀಸ್. ಎ.ಡಿ.ಎಸ್.ಆರ್. ಆಫೀಸಿಗೆ ನಾವು ಏನು ಅರ್ಜಿ ಹಾಕುತ್ತೇವೆ, ಅರ್ಜಿ ಹಾಕಿದ ಇಷ್ಟು ದಿನದೊಳಗೆ ಆ ಕಡತ ವಿಲೇವಾರಿ ಆಗಬೇಕು ಎಂದು ಹೇಳುವ ಸುತ್ತೋಲೆ-ಯನ್ನು ಕಳುಹಿಸುವುದಕ್ಕೆ ಸಾಧ್ಯವಿದೆ?

ಶ್ರೀ ರಮೇಶ್ ಸಿ. ಜಿಗಜಿಣಗಿ:- ಮಾನ್ಯ ಸದಸ್ಯರು ಹೇಳಿದ್ದುದು ನಿಜ. ಆದರೆ ಇಲ್ಲಿ ಸರ್ವೆ ಮಾಡತಕ್ಕ ವ್ಯಕ್ತಿಗಳು ಅಧಿಕಾರಿಗಳು ಬಹಳ ಕಡಿಮೆ ಇದ್ದರು. ಸುಮಾರು 1500 ಹುದ್ದೆಗಳು ರಾಜ್ಯ-ದಲ್ಲಿ ಖಾಲಿ ಇವೆ. ಅದನ್ನು ಗಮನದಲ್ಲಿಟ್ಟುಕೊಂಡು ಸಾವಿರ ಹುದ್ದೆಗಳನ್ನು ಭರ್ತಿ ಮಾಡುವಂಥ ವ್ಯವಸ್ಥೆ ಮಾಡಿದ್ದೇವೆ. ಮುಂದೆ ವಿಳಂಬವಾಗದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಹೆಚ್.ಡಿ. ಬಸವರಾಜು:- ಒಂದು ಹೋಬಳಿಗೆ ಒಬ್ಬ ಸರ್ವೇಯರ್ ನೇಮಕ ಮಾಡುವ ಉದ್ದೇಶ ಇದೆ ಎಂದು ಮಂತ್ರಿಗಳು ತಿಳಿಸಿದ್ದರು. ನನ್ನ ತಾಲ್ಲೂಕಿನಲ್ಲಿ 5 ಹೋಬಳಿಗಳು ಬರುತ್ತಿದೆ. ಐದು ಹೋಬಳಿಗಳಿಗೆ 5 ಸರ್ವೇಯರನ್ನು ತಾವು ಮಾಡುತ್ತಿದ್ದೀರಿ. ಆದರೆ ಒಂದು ಸೋಜಿಗದ ಸಂಗತಿ ಎಂದರೆ ವಿರಾಜಪೇಟೆ ತಾಲ್ಲೂಕಿನಲ್ಲಿ ಒಂದು ಖಾಯಂ ಸರ್ವೆ ಆಫೀಸ್ ಇಲ್ಲ. ಆದಕ್ಕೆ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ ತಾತ್ಕಾಲಿಕವಾಗಿ ಕೆಲಸ ಮಾಡುವ ಪದ್ಧತಿ ನಿಲ್ಲಿಸಿ ಖಾಯಂ ಆಗಿ ಅಲ್ಲಿ ಒಂದು ಕಛೇರಿ ತೆರೆಯುವ ಕೆಲಸವನ್ನು ಸರ್ಕಾರ ಮಾಡುತ್ತದೆಯೇ? ಅದರ ಬಗ್ಗೆ ಸರ್ಕಾರ ಗಮನ ಹರಿಸುತ್ತದೆಯೇ? ಏಕೆಂದರೆ ಇದು ಬಹಳಷ್ಟು ದಿನದ ಬೇಡಿಕೆ. ಅದರ ಬಗ್ಗೆ ನಿಖರ-ವಾಗಿ ಉತ್ತರ ಕೇಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ:- ಮಾನ್ಯ ಸದಸ್ಯರು ವಿರಾಜಪೇಟೆಯಲ್ಲಿ ಹೆಚ್ಚಿನ ಕೇಸುಗಳಿವೆ, ಅಲ್ಲ ಒಂದು ಸರ್ವೇಯರ್ ಆಫೀಸ್ ತೆಗೆಯಬೇಕೆಂದು ಕೇಳುತ್ತಿದ್ದಾರೆ. ಆದರೆ ಕೇಳಿದಲ್ಲೆಲ್ಲಾ ತೆಗೆಯುವುದಕ್ಕಾಗುವುದಿಲ್ಲ. ಕಾರ್ಯತತ್ಪರತೆ, ಎಲ್ಲೆಲ್ಲಿ ಕೆಲಸದ ಒತ್ತಡ ಹೆಚ್ಚು ಇದೆ ಅದನ್ನು ನೋಡಿಕೊಂಡು ಅವರ ಸೂಚನೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು:- ನಾನು ಕೇಳಿದ್ದುದು ವಿರಾಜಪೇಟೆಯಲ್ಲಿ ಹಂಗಾಮಿ ಕಛೇರಿ ಮಾಡುತ್ತಿದ್ದಾರೆ ಅದನ್ನು ಪರ್ಮನೆಂಟ್ ಮಾಡಿದರೆ ಸಾಕು. ಹೋಬಳಿಯಲ್ಲಿ ತೆಗೆಯಿರಿ ಎಂದು ನಾನು ಕೇಳಲಿಲ್ಲ. ವಿರಾಜಪೇಟೆ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿ ತೆಗೆದರೆ ಸಾಕು.

ಒಬ್ಬ ಮಾನ್ಯ ಸದಸ್ಯರು:- ಇದು ಕೊಡಗಿಗೆ ಮಾತ್ರ ಸೀಮಿತವಲ್ಲ. ಸರ್ವೇಯರ್ ಹುದ್ದೆಗೆ ಸೀಮಿತ ಅಲ್ಲ. ಬೆಳಗಾಂ ಜಿಲ್ಲೆಯಲ್ಲಿ 156 ವಿಲೇಜ್ ಆಕೌಂಟೆಂಟ್ ಹುದ್ದೆಗಳು ಖಾಲಿ ಇವೆ; ಸರ್ವೇಯರ್ ಹುದ್ದೆಗಳು ಖಾಲಿ ಇವೆ. ಅವನ್ನು ತೀವ್ರವಾಗಿ ತುಂಬಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ:- ಮುಂದಿನ ತಿಂಗಳ 30ರೊಳಗೆ ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಅವನ್ನೆಲ್ಲಾ ತುಂಬುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ಗೋಣಿಕೊಪ್ಪ ಮತ್ತು ಮೈಸೂರು ನಡುವೆ ಮೆಟಡಾರ್, ವ್ಯಾನ್‌ಗಳಲ್ಲಿ ಸಾರ್ವಜನಿಕರ ಪ್ರಯಾಣ.

367 (2447) **ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಣಿಕೊಪ್ಪ ಮತ್ತು ಮೈಸೂರಿನ ನಡುವೆ ಮೆಟಡಾರ್ ವ್ಯಾನ್‌ಗಳಲ್ಲಿ ಸಾರ್ವಜನಿಕರು ಪ್ರಯಾಣ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಿಗೆ ಆದಾಯ ಕಡಿಮೆ ಯಾಗುವುದಿಲ್ಲವೇ?

ಇ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಹೌದು.

ಆ) ಹೌದು.

ಇ) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಟಿಡಿ:93:ಟಿಎಂಎ:93(1)(2) ದಿನಾಂಕ: 09-06-1993ರಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ರಾಷ್ಟ್ರೀಕೃತ ಮಾರ್ಗದಲ್ಲಿ ಅನಧಿಕೃತನಾಗಿ ಮತ್ತು ಕಳ್ಳಾಟಿಕೆಯಿಂದ ಓಡಾಡುತ್ತಿರುವ ಪ್ರವಾಸೀ ವಾಹನಗಳನ್ನು ಹತೋಟಿಗೆ ತರಲು ರಾಜ್ಯದ ದಕ್ಷಿಣ ವಲಯದ ಜಿಲ್ಲೆಗಳಾದ ಮಂಡ್ಯ, ಬೆಂಗಳೂರು, ಮೈಸೂರು, ತುಮಕೂರು, ಕೋಲಾರ, ಚಿಕ್ಕ -